# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 13-07-2024 ರಿಂದ 17-07-2024**

ಸಂ. ಗ್ರಾ.ಕೃ.ಹ.ಸೇ.ಬ/038/2024 ದಿನಾಂಕ: 12.07.2024

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 13-07-2024 ರಿಂದ 17-07-2024 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (13.07.2024) | ದಿನ-2 (14.07.2024) | ದಿನ-3 (15.07.2024) | ದಿನ-4 (16.07.2024) | ದಿನ-5 (17.07.2024) | | |
| ಮಳೆ ಪ್ರಮಾಣ (ಮಿ.ಮೀ.) | 20 | 35 | 35 | 40 | 74 | 204.3 | 204↓ |
| ಗರಿಷ್ಠ ಉಷ್ಣಾಂಶ (°C) | 29.4 | 28.3 | 27 | 25.1 | 25.9 | 28.0 | 27.1↓ |
| ಕನಿಷ್ಠ ಉಷ್ಣಾಂಶ (°C) | 19.7 | 19.8 | 19.9 | 20 | 19.9 | 22.0 | 19.9↓ |
| ಮೋಡದ ಹೊದಿಕೆ (ಒಕ್ಟಾ) | 8 | 8 | 8 | 8 | 8 | 7 | 8↑ |
| ಗರಿಷ್ಠ ಆರ್ದ್ರತೆ (ಶೇ.) | 94 | 94 | 94 | 94 | 94 | 94.4 | 94↓ |
| ಕನಿಷ್ಠ ಆರ್ದ್ರತೆ (ಶೇ.) | 73 | 80 | 85 | 90 | 90 | 88.8 | 83.6↓ |
| ಗಾಳಿಯ ವೇಗ (Kmph) | 6 | 8 | 11 | 12 | 14 | 5.2 | 10.2↑ |
| ಗಾಳಿಯ ದಿಕ್ಕು (°) | 169 | 270 | 283 | 248 | 248 | 144 | 244↑ |
| ಮುನ್ಸೂಚನೆ | R++SSW | R++SSW | R++SSW | R++SSW | R++SSW | | |
| ಸಂಭವನೀಯತೆ (%) | >75 | >75 | >75 | >75 | >75 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 17.07.2024 ರಿಂದ 23.07.2024 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ



ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿದ್ದು, ಗುಡುಗು-ಮಿಂಚು ಸಹಿತ ಹಲವೆಡೆ ಸಾಧಾರಣದಿಂದ ಹೆಚ್ಚು ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **25.1-29.4°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **19.7-20.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **94%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **73%** ರಿಂದ **90%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **6-14** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 |
|---|---|---|---|---|---|---|---|---|---|---|---|---|---|
| Rainfall | 3710.5 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3316.6 | 1581.2 |
| Rainy days | 105 | 127 | 112 | 107 | 119 | 121 | 112 | 123 | 126 | 152 | 125 | 105 | 56 |

| Realised Rainfall (04th JULY to 10th JULY, 2024) | Rainfall Forecast Map (12th JULY to 18th JULY 2024) | Temperature conditional Index Outlook (10.06.2024 to 16.06.2024) | Normalized Difference Vegetation Index |
|---|---|---|---|
|  |  |  |  |

# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

| ಮುಂದಿನ ಐದು ದಿನಗಳು ಹೆಚ್ಚು ಮಳೆಯಾಗುವ ಸಂಭವವಿರುವುದರಿಂದ ರೈತರು ಕೃಷಿ ಚಟುವಟಿಗಳನ್ನು ಮುಂದೂಡುವುದು ಸೂಕ್ತವಾಗಿದೆ. | |
|---|---|
| ಅಡಿಕೆ<br>(ಬೇರು ಹುಳ) | ರೈತರು ಸಂಜೆ 6:30 ರಿಂದ 7:30ರ ಸಮಯದಲ್ಲಿ ಹಾರಾಡುವ ರೆಕ್ಕೆ ಹುಳುಗಳನ್ನು ಹಿಡಿದು ನಾಶಪಡಿಸಬೇಕು. ಕ್ಲೋರೋಫೈರಿಫಾಸ್ ಅನ್ನು 2 ಮಿ.ಲೀ/ಲೀ ನೀರಿಗೆ ಮಿಶ್ರಣ ಮಾಡಿದ ಕೀಟನಾಶಕದ ದ್ರಾವಣವನ್ನು ಅಡಿಕೆ ಗಿಡ/ಮರದಲ್ಲಿರುವ ಬೇರು ತಲುಪುವಂತೆ ಸುರಿಯುವುದು. |
| ಹಸು<br>(ಸಾಮಾನ್ಯ ಸಲಹೆ) | ➢ ಮಳೆಗಾಲವಾಗಿರುವುದರಿಂದ ಗುಡುಗು-ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಿಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜುಲೈ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ.<br>➢ ಜಾನುವಾರುಗಳಿಗೆ ಜಂತುನಾಶಕವನ್ನು ನೀಡುವುದು |

## ಸಾಮಾನ್ಯ ಸಲಹೆ:

| | |
|---|---|
| ಸಾಮಾನ್ಯ ಸಲಹೆ | ರೈತರು ತೋಟಗಾರಿಕಾ ಬೆಳೆಗಳಲ್ಲಿ ಮಳೆ ನೀರು ನಿಲ್ಲುವುದನ್ನು ತಪ್ಪಿಸಲು ಬಸಿಗಾಲುವೆಯನ್ನು ನೀಡುವುದು. ಇಲ್ಲವಾದಲ್ಲಿ ಇದರಿಂದ ಹಲವಾರು ರೋಗಗಳು ಹರಡುವ ಸಂಭವವಿದೆ. |
| ಸಾಮಾನ್ಯ ಸಲಹೆ | ಮುಂದಿನ 3 ದಿನ ಹೆಚ್ಚು ಮಳೆಯಾಗುವ ಸಂಭವವಿರುವ ಕಾರಣದಿಂದ ರೈತರು ಭತ್ತದ ನಾಟಿ ಕಾರ್ಯವನ್ನು ಮುಂದೂಡುವುದು ಸೂಕ್ತವಾಗಿದೆ. |
| ಮೀನು ಮರಿ ಉತ್ಪಾದನೆ | ➢ ಕರಾವಳಿ ಮೀನು ಕೃಷಿಕರು ಮಿನು ಕೊಳದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸಮಯವಾಗಿದೆ.<br>➢ ಮೀನು ಮರಿ ಪಾಲನಾ ಕೊಳಗಳಲ್ಲಿ ಸುಣ್ಣವನ್ನು ಹಾಕುವ ಮೂಲಕ ರಸಸಾರವನ್ನು 7.5 ಇರುವಂತೆ ಸರಿದೂಗಿಸುವುದು. ಅನಂತರ ಹಟ್ಟಿ ಗೊಬ್ಬರವನ್ನು ಹಾಕಿ ನೈಸರ್ಗಿಕ ಮೀನಿನ ಆಹಾರ ಉತ್ಪಾದನೆಯಿಂದ ಕೊಳದ ನೀರು ತಿಳಿ ಹಸಿರಿನಿಂದ ಕಂದು ಬಣ್ಣಕ್ಕೆ ತಿರುಗುವ ವೇಳೆಗೆ ಸಿಹಿ ನೀರು ಮೀನು ಮರಿಗಳನ್ನು ದಾಸ್ತಾನು ಮಾಡಬಹುದು. ಈ ಮರಿಗಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಧಿಕೃತ ಸರಬರಾಜು ಮಾಡುವವರಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)


ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.